ಆಸ್ಪತ್ರೆಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಪರಿವರ್ತಿಸುವುದು.

೧೮೧೭. ಶ್ರೀ ಬಿ. ಜಿ. ಜಮಖಂಡಿ (ಮುದೊಳ್).—ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಆರೋಗ್ಯ ಇಲಾಖೆಯ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದ ಕೆಲವು ಆಸ್ಪತ್ರೆಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಪರಿವರ್ತಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಹಾಲಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಸ್ವಾಯತ್ತತೆ ಸಂಸ್ಥೆಗಳನ್ನಾಗಿ ಪರಿವರ್ತಿಸಿದ ನಂತರ ಉಂಟಾಗುತ್ತಿರುವ ತೊಂದರೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ ? ಹಾಗೂ ಈ ರೀತಿಯು ಅನ್ಯಾಯವನ್ನು ಮುಂದೆ ನೌಕರರಿಗೆ ಉಂಟಾಗದಂತೆ ತಡೆಗಟ್ಟಲು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ನಿಜ.

ಆ) ಇಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಸಿದ್ಧವಿಲ್ಲವೇ ಪಟ್ಟಿ

ಶ್ರೀ ಎ. ಲಕ್ಷ್ಮೀಸಾಗರ್.— ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ಕಾರವಾರ ಬಂದರಿನ ಕಾರ್ಮಿಕರಿಗೆ ಇರುವ ಅನುಕೂಲತೆಗಳ ಬಗ್ಗೆ

೧೮೫೩. ಶ್ರೀ ಎಸ್. ಎಂ. ಅಡ್ಯಂತಾಯ (ಸುರತ್ಕಲ್).— ಮಾನ್ಯ ಮೀನುಗಾರಿಕೆ ಹಾಗೂ ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರವಾರ ಬಂದರಿನಲ್ಲಿ ಸರಕು ಹೇರಿಕೆ, ಸರಕು ಸಾಗಣೆ ಮಾಡುತ್ತಿರುವ ಕೆಲಸಗಾರರಿಗೆ ದೇಶದ ಇತರ ಬೃಹತ್ ಬಂದರುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಇರುವ ಸವಲತ್ತು ಮತ್ತು ಅನುಕೂಲತೆಗಳನ್ನು ಕಲ್ಪಿಸಲಾಗಿದೆಯೇ?

ಆ) ಕಾರ್ಮಿಕರ ಯೋಗಕ್ಷೇಮಕ್ಕಾಗಿ ಇರುವ ಡಾಕ್ ಲೇಬರ್ ಬೋರ್ಡ್ ಅಸ್ತಿತ್ವದಲ್ಲಿದೆಯೇ?

ಇ) ಹಾಗಿದ್ದಲ್ಲಿ ಈ ಕಾರ್ಮಿಕರಿಗೆ ಬೃಹತ್ ಬಂದರುಗಳಲ್ಲಿ ದೊರೆಯುವ ಅನುಕೂಲ ಮತ್ತು ಸವಲತ್ತುಗಳನ್ನು ಯಾವಾಗ ದೊರಕಿಸಿಕೊಡಲಾಗುವುದು?

ಶ್ರೀ ಪಿ. ಬೈರೇಗೌಡ (ಮೀನುಗಾರಿಕೆ ಹಾಗೂ ಬಂದರು ಮಂತ್ರಿಗಳು)—

ಅ) ಇಲ್ಲ.

ಆ) ಇಲ್ಲ.

ಇ) ಕಾರವಾರ ಬಂದರು ಬೃಹತ್ ಬಂದರದ ಸ್ಥಾನಮಾನ ಪಡೆದಾಗ.